ಸೃಜನಿ

ISSN: 2583-3510

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 88-94
Bi-Monthly, Peer-Reviewed, Open Access, Indexed Journal

SIRDF JOURNALS
editor@srujani.in
www.srujani.in

# ಪ್ರಾಥಮಿಕ ಶಾಲಾ ಹಂತದ ಪಠ್ಯಕ್ರಮ: ಒಂದು ಅವಲೋಕನ

**ಬಿ. ಸಿದ್ದಪ್ಪ[*] ಮತ್ತು ಡಾ. ಪ್ರಜ್ಞಾ ಕೆ.ವಿ[**]**

[*]ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

[**]ಸಹ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಳ್ಳಾರಿ.

***Abstract:***

*ಭಾರತವು ವಿಶಿಷ್ಟ, ವಿಭಿನ್ನ ಹಾಗೂ ಸಂಕೀರ್ಣ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯನ್ನು ಹೊಂದಿರುವುದರ ಜೊತೆಗೆ ಎಲ್ಲರ ಕ್ಷೇಮ ಹಾಗೂ ಪ್ರಜಾಸತ್ತೆಯ ಮೌಲ್ಯಗಳಿಗೆ ಬದ್ಧವಾಗಿದೆ. ಯಾವುದೇ ಒಂದು ರಾಷ್ಟ್ರದ ಅಭಿವೃದ್ಧಿ ಆ ರಾಷ್ಟ್ರದ ಶೈಕ್ಷಣಿಕ ವ್ಯವಸ್ಥೆಯನ್ನು ಅವಲಂಬಿಸಿದೆ. ಅದರಲ್ಲೂ ಪ್ರಾಥಮಿಕ ಶಾಲಾ ಹಂತದ ಶಿಕ್ಷಣವೇ ಭದ್ರ ಬುನಾದಿ ಎಂಬುದು ನಿರ್ವಿವಾದದ ಸಂಗತಿಯಾಗಿದೆ. ಈ ಹಂತ ದುರ್ಬಲವಾದರೆ ವ್ಯಕ್ತಿಯ ಶೈಕ್ಷಣಿಕ ಜೀವನ ಹಿನ್ನಡೆಯಾಗುವುದು. ಆದುದರಿಂದಲೇ ಮುಂದುವರೆದ ರಾಷ್ಟ್ರಗಳು ಪ್ರಾಥಮಿಕ ಶಾಲಾ ಹಂತದ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಿವೆ.*

**Keywords:** *ಶಾಲೆ, ಶಿಕ್ಷಣ, ಪ್ರಾಥಮಿಕ ಹಂತ, ಪಠ್ಯಕ್ರಮ, ಅಭಿವೃದ್ಧಿ,*

## ಪೀಠಿಕೆ

ಯಾವುದೇ ಒಂದು ದೇಶದ ಭವಿಷ್ಯ ಆ ದೇಶದ ಶೈಕ್ಷಣಿಕ ನೀತಿಗಳು ಮತ್ತು ಪಠ್ಯಕ್ರಮ ಚೌಕಟ್ಟನ್ನು ಅವಲಂಬಿಸಿರುತ್ತದೆ. ಯಾವ ದೇಶ ತನ್ನ ಸಮಕಾಲೀನ ಅಗತ್ಯಕ್ಕೆ ತಕ್ಕಂತಹ ಶಿಕ್ಷಣ ನೀತಿಯನ್ನು ಮತ್ತು ಪಠ್ಯಕ್ರಮವನ್ನು ಪರಿಷ್ಕರಿಸುವುದಿಲ್ಲವೋ ಅದು ಅಧಃಪತನದ ದಾರಿಯಲ್ಲಿದೆ ಎಂದು ಅರ್ಥ. ಈ ಎರಡು ವೈಜ್ಞಾನಿಕತೆ ಮತ್ತು ವೈಚಾರಿಕತೆಯ ತಳಹದಿಯ ಮೇಲೆ ರೂಪುಗೊಳ್ಳಬೇಕು ಹಾಗೆಯೇ ವಾಸ್ತವದಲ್ಲಿ ಅಳವಡಿಸಲು ಅದಕ್ಕೆ ಅಡೆತಡೆಗಳಿರಬಾರದು.

ಭಾರತೀಯ ಸಂವಿಧಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು 1976ರವರೆಗೆ ರಾಜ್ಯ ಸರ್ಕಾರಗಳಿಗೆ ಆ ನಂತರ ಸಂವಿಧಾನಕ್ಕೆ ತಿದ್ದುಪಡಿ ತಂದು ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಯಿತು. ಆ ನಂತರ 1986ರಲ್ಲಿ ಪ್ರಪ್ರಥಮವಾಗಿ ದೇಶದೆಲ್ಲಡೆ ಏಕರೂಪದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರಲಾಯಿತು. 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಎನ್‌ಸಿಇಆರ್‌ಟಿಗೆ ರಾಷ್ಟ್ರೀಯ ಪಠ್ಯಕ್ರಮದ ನೆಲೆಗಟ್ಟನ್ನು ರೂಪಿಸುವ ಜವಾಬ್ದಾರಿಯನ್ನುವಹಿಸಲಾಯಿತಲ್ಲದೆ ಈ ನೆಲೆಗಟ್ಟನ್ನು ನಿರ್ದಿಷ್ಟ ಅವಧಿಗಳಲ್ಲಿ ಪರಾಮರ್ಶೆ ಮಾಡುವಂತೆ ಸೂಚಿಸಲಾಯಿತು. ರಾಷ್ಟ್ರದ ಮಕ್ಕಳೆಲ್ಲರಿಗೂ ಶಿಕ್ಷಣವನ್ನು ಒದಗಿಸುವ ಅಗಾಧತೆ ಹಾಗೂ ಪ್ರಾಮುಖ್ಯತೆಯನ್ನು ಗಮನಿಸಿದರೆ ಆಗಾಗ ನಾವೆಲ್ಲರೂ ಒಟ್ಟಾಗಿ ಕುಳಿತು ನಮ್ಮ ನಮ್ಮಲ್ಲೇ ಈ ಕಾರ್ಯವನ್ನು ಸಾಧಿಸುವಲ್ಲಿ ನಾವೇನು ಮಾಡಿದ್ದೇವೆ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವ ಅಗತ್ಯವಿದೆ. ಶಿಕ್ಷಣದ ಹೆಸರಿನಲ್ಲಿ ನಮ್ಮ ಮಕ್ಕಳಿಗೆ ನಾವೇನು ನೀಡುತ್ತಿರುವೆವೋ ಅದರ ಬಗ್ಗೆ ಪುನರ್‌ಚಿಂತನೆ ನಡೆಸುವ ಅನಿವಾರ್ಯತೆಯಿದೆ.

***Please cite this article as:*** ಸಿದ್ದಪ್ಪ ಬಿ ಮತ್ತು ಪ್ರಜ್ಞಾ ಕೆ.ವಿ. (2022). ಪ್ರಾಥಮಿಕ ಶಾಲಾ ಹಂತದ ಪಠ್ಯಕ್ರಮ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 88–94.

**ಪಠ್ಯಕ್ರಮದ ಪರಿಕಲ್ಪನೆ**

ಶಿಕ್ಷಣವು ರಾಷ್ಟ್ರ ನಿರ್ಮಾಣದ ಕೀಲಿಕೈ, ಇದು ಯಶಸ್ವಿಯಾಗಬೇಕಾದರೆ ಉತ್ತಮ ಪಠ್ಯಕ್ರಮ ಅವಶ್ಯಕತೆಯಾಗಿದೆ. ಸಾಮಾನ್ಯವಾಗಿ ಶಾಲೆಯಲ್ಲಿ ಕೈಗೊಳ್ಳುವಂತಹ ಅಥವಾ ಆಚರಣೆ ಮಾಡುವಂತಹ ಪ್ರತಿಯೊಂದು ಕಾರ್ಯಗಳನ್ನು ನಿರ್ದೇಶಿಸುವ ಶಕ್ತಿ ಪಠ್ಯಕ್ರಮಕ್ಕಿದೆ. ಅಂತೆಯೇ ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿನ ಭಾಗಶಃ ಗುರಿ/ಉದ್ದೇಶಗಳು ಸಮರ್ಪಕ ಪಠ್ಯಕ್ರಮದಿಂದ ಮಾತ್ರ ನೆರವೇರಲ್ಪಡುತ್ತವೆ.

ವ್ಯಕ್ತಿ ವಿಕಾಸದಿಂದ ಆರಂಭವಾಗುವ ಶಿಕ್ಷಣ ಕುಟುಂಬ, ಸಮಾಜ, ರಾಷ್ಟ್ರದವರೆಗೂ ವ್ಯಾಪಿಸಿ ನಿಲ್ಲಬೇಕು. ಅಂತಹ ಯುವ ಪೀಳಿಗೆಯನ್ನು ಸೃಷ್ಟಿಸಬಲ್ಲ ಶಿಕ್ಷಣ ನೀತಿಯೊಂದನ್ನು ರೂಪಿಸಬೇಕು. ಶಿಕ್ಷಣ 'ತ್ರಿಮುಖ' ಪ್ರಕ್ರಿಯೆ, ಕಲಿಸುವ ಶಿಕ್ಷಕ, ಕಲಿಯುವ –ವಿದ್ಯಾರ್ಥಿ ಹಾಗೂ ಪಠ್ಯಕ್ರಮ ಈ ಮೂರು ಶಿಕ್ಷಣದ ಪ್ರಕ್ರಿಯೆಯ ಪ್ರಮುಖ ಅಂಶಗಳಾಗಿದ್ದು, ಅದರಲ್ಲಿ ಶಿಕ್ಷಣದ ಗುರಿಗಳನ್ನು ಯಶಸ್ವಿಗೊಳಿಸುವಲ್ಲಿ ಪಠ್ಯಕ್ರಮವು ಪ್ರಮುಖ ಸಾಧನವಾಗಿದೆ. ಪಠ್ಯಕ್ರಮದ ಆಧುನಿಕ ಕಲ್ಪನೆಯಂತೆ ಅದು ವ್ಯಕ್ತಿಯ ಹಾಗೂ ಸಮೂಹ ಜೀವನದ ಎಲ್ಲಾ ಕ್ಷೇತ್ರಗಳನ್ನಾಧರಿಸಿದೆ.

**ಗಾಂಧೀಜಿಯವರ ದೃಷ್ಟಿಕೋನದಲ್ಲಿ ಪಠ್ಯಕ್ರಮ**

ಗಾಂಧೀಜಿಯವರು ಆಧುನಿಕ ಭಾರತೀಯ ಶಿಕ್ಷಣ ತಜ್ಞರಲ್ಲಿ ಒಬ್ಬರಾಗಿದ್ದು, ಇವರ ಶೈಕ್ಷಣಿಕ ವಿಚಾರಗಳು ಅವರು ಪ್ರತಿಪಾದಿಸಿದ ಸರ್ವೋದಯ ತತ್ವದಿಂದ ಒಡಮೂಡಿದ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಚಿಂತನೆಗಳಿಗೆ ಅಡಿಪಾಯವಾಗಿವೆ. ನೈತಿಕ ಹಾಗೂ ಮಾನವೀಯ ಮೌಲ್ಯಗಳ ಆಧಾರದ ಮೇಲೆ ರೂಪಿತವಾದ ಶಿಕ್ಷಣವನ್ನು ಮೂಲ ಶಿಕ್ಷಣ ಎಂದು ಗಾಂಧೀಜಿಯವರು ಕರೆದರು. ಇದರ ಮೂಲ ಆಶಯ ಶಿಕ್ಷಣವು ಮಕ್ಕಳ ಜೀವನವನ್ನು ರೂಪಿಸುವಂತಿರಬೇಕು ಹಾಗೂ ಸೃಜನಶೀಲತೆಯೊಂದಿಗೆ ಉತ್ತಮ ನಾಗರಿಕನನ್ನಾಗಿ ಮಾಡುವಂತಾಗಬೇಕು. ಸತ್ಯ, ಅಹಿಂಸೆ, ಪ್ರೀತಿ, ಸಹಕಾರ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇತ್ಯಾದಿ ಮಾನವೀಯ ಮೌಲ್ಯಗಳನ್ನು ಬೆಳೆಸುವಂತಹ ಪಠ್ಯಕ್ರಮ ಪ್ರಾಥಮಿಕ ಹಂತದಿಂದಲೇ ರೂಪಿತವಾಗಬೇಕೆಂದು ಗಾಂಧೀಜಿಯವರ ಆಶಯವಾಗಿತ್ತು.

ಹಿಂದೆ ಗುರುಕುಲ ಶಿಕ್ಷಣದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವನ ಜ್ಞಾನ, ಪ್ರತಿಭೆಗಳ ಮಟ್ಟಕ್ಕೆ ಅನುಗುಣವಾದ ಶಿಕ್ಷಣ ನೀಡಲಾಗುತ್ತಿತ್ತು. ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಶಿಕ್ಷಣ ಕ್ರಮ ಅದಾಗಿತ್ತು. ಇಂಥ ಶ್ರೇಷ್ಠ ವಿದ್ಯೆಯನ್ನು ಕಲಿಯಲು ಜಗತ್ತಿನ ಮೂಲೆ ಮೂಲೆಗಳಿಂದ ಭಾರತದ ತಕ್ಷಶಿಲಾ, ನಲಂದಾ ಮುಂತಾದ ಗುರುಕುಲಗಳಿಗೆ ವಿದ್ಯಾರ್ಥಿಗಳು ಬರುತ್ತಿದ್ದರು. ಇಂತಹ ಶ್ರೇಷ್ಠ ಗುಣಮಟ್ಟದ ಶಿಕ್ಷಣ ಪದ್ಧತಿಯಿಂದಲೇ ಭಾರತೀಯ ಋಷಿಮುನಿಗಳು ಗಣಿತ, ಖಗೋಳಶಾಸ್ತ್ರ, ಭೌತವಿಜ್ಞಾನ, ಯೋಗ, ಆಯುರ್ವೇದ ಮುಂತಾದ ಕ್ಷೇತ್ರಗಳ ಜ್ಞಾನವನ್ನು ಜಗತ್ತಿಗೆ ನೀಡಲು ಸಾಧ್ಯವಾಯಿತು.

**ಶಾಲಾ ಹಂತದ ಪಠ್ಯಕ್ರಮದ ಪ್ರಸ್ತುತತೆ**

ಇಂದು ನಾವು ಪಡೆಯುತ್ತಿರುವ ಶಿಕ್ಷಣಕ್ಕೂ ನಮ್ಮ ಬದುಕಿಗೂ ಸಂಬಂಧವೇ ಇಲ್ಲದಂತಾಗಿದೆ. ಶಿಕ್ಷಣವು ಅಕ್ಷರ ಕಲಿಕೆಗೆ ಮಾತ್ರ ಸೀಮಿತವಾದಂತಿದೆ. ಶಾಲೆಗಳಲ್ಲಿ ಹೆಚ್ಚು ಅಂಕಗಳಿಸುವುದೇ ಶಿಕ್ಷಣದ ಮುಖ್ಯ ಗುರಿಯಾಗಿದೆ. ಪಾಲಕರು, ಶಿಕ್ಷಕರು ಮತ್ತು ಮಕ್ಕಳು ಕಲಿಕೆಯ ನೆಪದಲ್ಲಿ ಕೇವಲ ಅಂಕಗಳನ್ನು ಬೆನ್ನು ಹತ್ತಿದ್ದಾರೆ, ನಾವು ಕಲಿಯುತ್ತಿರುವ ಶಿಕ್ಷಣ ನಮ್ಮ ಬದುಕನ್ನು ಹೇಗೆ ರೂಪಿಸಬಲ್ಲದು ಅದು ನಮಗೆ ದಾರಿ ದೀಪವಾಗಬಲ್ಲದೆ, ಸಮಾಜವನ್ನು ಸುಧಾರಿಸಬಲ್ಲದೆ ಎಂಬ ಯಾವ ಪ್ರಶ್ನೆಗಳಿಗೆ ಸಮಧಾನ ನೀಡುವಂತಹ ಉತ್ತರಗಳಿಲ್ಲ.

ನಾವು ಪಡೆಯುವ ಶಿಕ್ಷಣವು ನಮ್ಮ ಬದುಕನ್ನು ಸರಿದಾರಿಗೆ ತರುವಂತಿರಬೇಕು. ಶಿಕ್ಷಣದಿಂದ ನಮ್ಮ ಮನಸ್ಸು ಮತ್ತು ಬದುಕು ಸುಗಮವಾಗಿ ಸಾಗುವಂತಿರಬೇಕು. ಶಿಕ್ಷಣದಿಂದ ನಮ್ಮ ಅಧರ, ಉದರಗಳು ತೃಪ್ತಿಯಿಂದ ತುಂಬುವಂತಿರಬೇಕು. ಶಿಕ್ಷಣದಿಂದ ನಮ್ಮನ್ನು ನಾವು ಅರಿಯುವಂತಾಗಬೇಕು. ಶಿಕ್ಷಣವು ನಮ್ಮ ಕಾಯಕಕ್ಕೆ ದಾರಿ ಮಾಡಿಕೊಡುವಂತಿರಬೇಕು. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ನೆರವು ನೀಡುವಂತಿರಬೇಕು. ಎಲ್ಲರಲ್ಲಿ ಸಾಮರಸ್ಯ ಹಾಗೂ ಸೌಹಾರ್ದ ಜೀವನ ಬೆಳೆಸುವಂತಿರಬೇಕು ಅಂತಹ ಶಿಕ್ಷಣದಿಂದ ಮಾತ್ರ ಸಮಾಜ ಸುಧಾರಿಸುತ್ತದೆ ನಾವೆಲ್ಲರೂ ಅಂತಹ ಶಿಕ್ಷಣವನ್ನು ಪಡೆದುಕೊಳ್ಳಬೇಕೆಂದರೆ ಪಠ್ಯಕ್ರಮದಲ್ಲಿ ಸುಧಾರಣೆಯಾಗಬೇಕಾಗಿದೆ.

ಮಕ್ಕಳು ಶಾಲೆಯಲ್ಲಿ ಕಲಿಯುವ ವಿಷಯಗಳನ್ನು ಪಠ್ಯಕ್ರಮವು ಹೊಂದಿಸುತ್ತದೆ, ಎಲ್ಲಾ ಮಕ್ಕಳಿಗೂ ಅವರ ಅನನ್ಯತೆಯನ್ನು ಗುರುತಿಸುವ, ಆಚರಿಸುವ ಮತ್ತು ಅವರ ಸಂಪೂರ್ಣ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಕಲಿಕೆಯ ಅವಕಾಶಗಳನ್ನು ಒದಗಿಸುವುದನ್ನು ಖಾತ್ರಿಪಡಿಸುವುದು ಪಠ್ಯಕ್ರಮದ ಗುರಿಯಾಗಬೇಕು. ಪ್ರಾಥಮಿಕ ಶಿಕ್ಷಣ ನಾಗರಿಕ ಜೀವನದ ಭದ್ರ ಬುನಾದಿಯ ಮೊದಲ ಹಂತ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ, ಆದರೆ ಇದಕ್ಕೆ ಸಲ್ಲಬೇಕಾದ ಮಹತ್ವವನ್ನು ಕೊಡುವುದರಲ್ಲಿ ಎಡವಿದ್ದೇವೆಯೆ ಎಂಬ ಪ್ರಶ್ನೆಗೆ ಉತ್ತರ – ಹೌದು. ಪಠ್ಯಕ್ರಮ ಎಳೆಯ ಮನಸ್ಸುಗಳಿಗೆ ಹೆಚ್ಚು ಆಕರ್ಷಣೆಯವಾದ, ಅವರಿಗೆ ಆಸಕ್ತಿ ಹುಟ್ಟಿಸುವ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು. ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮದಲ್ಲಿ ಆಗಾಗ್ಗೆ ಮೂಗು ತೂರಿಸುವ ಹವ್ಯಾಸವನ್ನು ಸರ್ಕಾರ ನಿಲ್ಲಿಸುವುದು ಸೂಕ್ತ. ಶಿಕ್ಷಣ ಕ್ರಮವನ್ನು ಪದೇ ಪದೇ ಬದಲಾಯಿಸುವುದು ಸರಿಯಾದುದಲ್ಲ. ಮುಂದುವರೆದ ದೇಶಗಳಲ್ಲಿ ಪ್ರಾಥಮಿಕ ಪಠ್ಯಕ್ರಮದಲ್ಲಿ ದೇಶದ ಚರಿತ್ರೆಯ ಬಗ್ಗೆ ಅದರಲ್ಲೂ ಐತಿಹಾಸಿಕ ವ್ಯಕ್ತಿಗಳ ಬಗ್ಗೆ ಹೆಚ್ಚು ವಿವರಗಳನ್ನು ಸೇರಿಸುವ ಗೋಜಿಗೆ ಹೋಗುವುದಿಲ್ಲ. ತಮ್ಮ ದೇಶದ ಹಿರಿಮೆಯನ್ನು ಮಕ್ಕಳಿಗೆ ಪರಿಚಯಿಸುತ್ತಾರೆ. ನಮ್ಮಲ್ಲೂ ಇಂಥ ಕ್ರಮ ಅನುಸರಿಸುವುದು ಯೋಗ್ಯ.

ಭಾರತದ ಪ್ರಾಕೃತಿಕ ಸಂಪತ್ತು, ಪ್ರಾಣಿ ಸಂಕುಲ, ವಿವಿಧ ಬಗೆಯ ಮರಗಿಡಗಳು ನಿಸರ್ಗದ ರಕ್ಷಣೆಯ ವಿವಿಧ ಕ್ರಮಗಳು, ಆರೋಗ್ಯ ರಕ್ಷಣೆಯ ಉಪಾಯಗಳು, ಪರಸ್ಪರರಿಗೆ ನೆರವಾಗುವುದು, ಸಹಬಾಳ್ವೆಯ ಮಹತ್ವ, ನಾಗರೀಕರ ಹಕ್ಕು ಕರ್ತವ್ಯಗಳು ಮುಂತಾದ ವಿಷಯಗಳನ್ನು ಮಕ್ಕಳಿಗೆ ಅರ್ಥವಾಗುವಂಥ ಸರಳ ಭಾಷೆಯಲ್ಲಿ ವಿವರಿಸಬೇಕು. ಮಕ್ಕಳಿಗೆ ಕಥೆಗಳೆಂದರೆ ಇಷ್ಟ, ಪ್ರಾಥಮಿಕ ಶಿಕ್ಷಣ ಪಠ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಥೆಗಳಿರಬೇಕು, ಚಿತ್ರಗಳೂ ಸಹ ಮಕ್ಕಳಲ್ಲಿ ಆಸಕ್ತಿ ಮೂಡಿಸುತ್ತವೆ. ಒಂದರಿಂದ ಮೂರನೇ ತರಗತಿಯವರೆಗಿನ ಪಠ್ಯಪುಸ್ತಕಗಳಲ್ಲಿ ಕನಿಷ್ಠ ಶೇ 50 ರಷ್ಟು ಭಾಗ ಚಿತ್ರಗಳಿಂದ ಕೂಡಿದ್ದರೆ, ಮಕ್ಕಳಿಗೆ ಕಲಿಯುವ ಆಸಕ್ತಿ ಹೆಚ್ಚುತ್ತದೆ ಎಂಬುದು ಮಕ್ಕಳ ಮನಶಾಸ್ತ್ರಜ್ಞರ ಅಭಿಪ್ರಾಯ.

ಇಂದು ಶಿಕ್ಷಣದಲ್ಲಿ ರಾಜಕೀಯ ಕೆಸರಾಟ ಪ್ರಾರಂಭವಾಗಿದೆ. ಶಾಲಾ ಪಠ್ಯಪುಸ್ತಕಗಳ ಪರಿಷ್ಕರಣೆಯಲ್ಲಿ ಇಂದಿನ ಪಕ್ಷಾತೀತ ರಾಜಕಾರಣಿಗಳನ್ನು ಗಮನಿಸಿದಾಗ ಇತ್ತೀಚಿಗೆ ಒಬ್ಬ ಹಿರಿಯರು ನೀಡಿದ ಹೇಳಿಕೆ "ಶಾಲಾ ಪಠ್ಯಪುಸ್ತಕಗಳಲ್ಲಿನ ದೋಷಗಳನ್ನು ಸಾರ್ವಜನಿಕರು ಗಂಭೀರವಾಗಿ ಗಮನಿಸಿದ್ದರೆ, ಸಂಬಂಧಿಸಿದವರ ಮೇಲೆ ಹಲ್ಲೆ ಮಾಡುತ್ತಿದ್ದರು" ಎಂದು ಹೇಳುವ ಮೂಲಕ ಪಠ್ಯಕ್ರಮದ ತಪ್ಪುಗಳನ್ನು ವಿಮರ್ಶಿಸಿದ್ದರು. ಈ ಹೇಳಿಕೆ ಒಂದು ರೀತಿಯಲ್ಲಿ ಹಿಂಸೆಗೆ ಪ್ರಚೋದನೆ ನೀಡಿದ್ದಾರೆ ಎಂದು ಮತ್ತೊಬ್ಬರ ವಾದ. ಇದಕ್ಕೆ ಹಿಂದಿನ ಪಠ್ಯಪುಸ್ತಕ ರಚನಾ ಸಮಿತಿ ಅಧ್ಯಕ್ಷರಾದ ಬರಗೂರು ರಾಮಚಂದ್ರಪ್ಪ ಇದಕ್ಕೆ ಪುರಾವೆಗಳನ್ನು ನೀಡುವ ಮೂಲಕ ಸಾಮಾಜಿಕ, ಪ್ರಾದೇಶಿಕ ಮತ್ತು ಮಹಿಳಾ ನ್ಯಾಯವನ್ನು ಪಾಲಿಸಿದ್ದೇವೆ. ಹಿಂದಿನ ಪಠ್ಯಗಳಲ್ಲಿ ಕೈಬಿಟ್ಟಿದ್ದ ಮಾಸ್ತಿ, ಅಡಿಗ, ಸಿದ್ದಯ್ಯ

ಪುರಾಣಿಕ, ಶಾಂತರಸ ಮುಂತಾದವರ ರಚನೆಗಳನ್ನು ಸೇರಿಸಿದ್ದೇವೆ. ಯಾವುದೇ ಮತ, ಧರ್ಮ, ಪ್ರವರ್ತಕರಲ್ಲೂ ವ್ಯತ್ಯಾಸ ಮಾಡದೇ ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಚಾರ್ಯ, ಬಸವಣ್ಣ, ಕನಕದಾಸ, ಪುರಂದದಾಸರು, ನಾರಾಯಣಗುರು ಮುಂತಾದ ಮಹನೀಯರ ಚಿತ್ರಣವನ್ನು ಸೇರಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ಸಮರ್ಥಿಸಿಕೊಂಡಿದ್ದಾರೆ.

ಇಲ್ಲಿ ಇಷ್ಟೇ ವೈಯಕ್ತಿಕ ಪ್ರತಿಷ್ಠೆ, ವಾದ–ಪ್ರತಿವಾದ ಬೇಕಾಗಿಲ್ಲ ಏನೂ ಗೊತ್ತಿರದ ಮುಗ್ಧ ಮಕ್ಕಳ ಸರ್ವತೋಮುಖ ಯಶಸ್ಸನ್ನು ಕಾಣುವ ಪಠ್ಯಕ್ರಮ ರಚನೆಯಾಗಬೇಕು. ಪ್ರತಿಯೊಂದು ಮಗುವೂ ವಿಶಿಷ್ಟವಾಗಿದೆ ಮತ್ತು ಜ್ಞಾನ, ವರ್ತನೆಗಳು, ಮೌಲ್ಯಗಳು ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳಲು ತನ್ನದೇ ಆದ ಮಾರ್ಗವನ್ನು ಹೊಂದಿದೆ. ಒಬ್ಬ ಶಿಕ್ಷಕನು ಪ್ರತಿ ಮಗುವಿನ ವೈವಿಧ್ಯಮಯ ಕಲಿಕೆಯ ಅಗತ್ಯತೆ ಮತ್ತು ವಿಚಾರಣೆಯ ಪ್ರಜ್ಞೆಯನ್ನು ಎಷ್ಟು ಪರಿಣಾಮಕಾರಿಯಾಗಿ ಪರಿಹರಿಸಬಹುದು ಎಂಬ ಸವಾಲು ಅಡಗಿದೆ.

ಮಾನವ ನಿರ್ಮಿತ ಜ್ಞಾನಗಳನ್ನು ಶಿಕ್ಷಣದಲ್ಲಿ ಅಳವಡಿಸುವಾಗ ಅವುಗಳಲ್ಲಿರುವ ಸಾರ್ವತ್ರಿಕ ಸತ್ಯಾಂಶಗಳನ್ನು ಒರೆಹಚ್ಚಿ ಹೆಕ್ಕಿ ತೆಗೆದು ಅಳವಡಿಸಿಬೇಕು. ವಿವಾದಾತ್ಮಕ ವ್ಯಕ್ತಿಗಳ ಜೀವನ ಚರಿತ್ರೆ ಮತ್ತು ಅಭಿಪ್ರಾಯಗಳನ್ನು ಬೋಧಿಸದೇ ಸಾರ್ವತ್ರಿಕವಾಗಿ ಒಪ್ಪಿಗೆಯಾದ ನಿರ್ವಿವಾದ ವ್ಯಕ್ತಿಗಳ ವಿಚಾರಗಳನ್ನು ಮಾತ್ರ ಶಿಕ್ಷಣದಲ್ಲಿರಬೇಕು. ಉದಾಹರಣೆಗೆ:– ಗಾಂಧೀಜಿ, ಬುದ್ಧ, ಬಸವ, ಅಂಬೇಡ್ಕರ್ ರವರ ವಿಚಾರಗಳು ಎಲ್ಲರೂ ಒಪ್ಪುವಂತಹವುಗಳು ಇತ್ಯಾದಿ. ಸದೃಢ ದೇಹ, ಭಾಷೆ ಮತ್ತು ಸದೃಢ ಮನಸ್ಸನ್ನು ಕಟ್ಟುವ ಸಮಗ್ರ ಜ್ಞಾನವನ್ನು ನೀಡಿದಲ್ಲಿ ಬೆಳವಣಿಗೆಯ ಮೆದುಳಿನಲ್ಲಿ ನೈಜವಿಜ್ಞಾನ ನಾಟಿಯಾಗಿ ಮುಂದಿನ ದಿನಗಳಲ್ಲಿ ಮಾನವ ನಿರ್ಮಿತ ಜ್ಞಾನವನ್ನು ಹಂಸಕ್ಷೀರ ನ್ಯಾಯದಂತೆ ಗ್ರಹಿಸಲು ಮಕ್ಕಳು ಸದೃಢರಾಗುತ್ತಾರೆ.

ಇತ್ತಿಚಿಗೆ ಗುಜರಾತ್ ರಾಜ್ಯ ಇದೇ ಶೈಕ್ಷಣಿಕ ವರ್ಷದಿಂದ ರಾಜ್ಯದಾದ್ಯಂತ 6 ರಿಂದ 12 ನೇ ತರಗತಿಗಳ ಶಾಲಾ ಪಠ್ಯಕ್ರಮದಲ್ಲಿ ಭಗವದ್ಗೀತೆ ಭಾಗವಾಗಲಿದೆ ಎಂದು ಅಲ್ಲಿನ ರಾಜ್ಯ ಸರ್ಕಾರ ಘೋಷಿಸಿದೆ. ಆಧುನಿಕ ಮತ್ತು ಪ್ರಾಚೀನ ಸಂಸ್ಕೃತಿ, ಸಂಪ್ರದಾಯಗಳು ಮತ್ತು ಜ್ಞಾನ ವ್ಯವಸ್ಥೆಗಳನ್ನು ಪರಿಚಯಿಸುವುದನ್ನು ಪ್ರತಿಪಾದಿಸುತ್ತದೆ ಎಂಬ ಸರ್ಕಾರದ ಉದ್ದೇಶ. ನವ ಭಾರತದ ವಿಕಾಸಕ್ಕೆ ಶೈಕ್ಷಣಿಕ ಪ್ರಗತಿಯೇ ಮೂಲ ಮಂತ್ರ. ಶಿಕ್ಷಣವೆಂಬುದು ಸಾಮರಸ್ಯದ ಸಂಕೇತವೇ ಹೊರತು ಸಂಘರ್ಷದ ಪ್ರತೀಕವಲ್ಲ, ಧರ್ಮವೆಂಬ ವಿಷ ಬೀಜ ಈಗ ಮೊಳಕೆಯೊಡೆಯುತ್ತಿರುವುದು, ಆ ಧರ್ಮದ ವಿಷಬೀಜದಲ್ಲಿ ಅನೇಕ ಅಪರೂಪದ ಹೊಸ ಬೆಳವಣಿಗೆಯ ಶಿಕ್ಷಣದಲ್ಲಿ ಬೇರೂರಲು ಪ್ರಯತ್ನಿಸುತ್ತಿರುವುದು, ವೈವಿಧ್ಯಮಯವಾದ ಭೂಮಿಯಲ್ಲಿ ವೈರುಧ್ಯದ ಮಧ್ಯೆ ವೈರತ್ವದ ಪ್ರಯತ್ನಕ್ಕೆ ಮಣಿ ಹಾಕುವುದು, ಆ ಮೂಲಕ ಹೊಸ ಬೆಳೆಗಳ ಬೆಳವಣಿಗೆಗೆ ಪುಷ್ಟಿ ಮಾತ್ರೆಯಂತೆ ಹೊಸ ಪಠ್ಯಗಳ ಸೇರ್ಪಡೆಯಲ್ಲಿ ಸಾಮಾಜಿಕ ಸ್ವಾಸ್ಥ್ಯದ ಬೇರು ಅಲುಗಾಡಿಸುತ್ತದೆ. ಒಂದು ಧರ್ಮದ ಮೌಲ್ಯಗಳನ್ನು, ಸಂಸ್ಕೃತಿಯನ್ನು ಎತ್ತಿ ಹಿಡಿದು ಅನ್ಯ ಧರ್ಮಗಳ ಬಗ್ಗೆ ತಾತ್ಸಾರ ಮನೋಭಾವನೆಯಿಂದ ನೋಡುವ ದೃಷ್ಟಿಕೋನ ಎತ್ತಿ ತೋರಿಸುತ್ತದೆ. ಆದರೆ ಶಾಲೆಗಳು ಜಾತಿ, ಧರ್ಮ, ಪ್ರಾಂತ್ಯ, ಲಿಂಗ ಇವೆಲ್ಲವುಗಳನ್ನು ಮೀರಿ ಎಲ್ಲಾ ಮಕ್ಕಳನ್ನು ಸಮಾನತೆಯಿಂದ ನೋಡುವ ಪರಿಪಾಠಕ್ಕೆ ಧಕ್ಕೆಯಾಗುತ್ತಿದೆ ಇದನ್ನು ಸರ್ಕಾರ ಪುನರ್ ಪರಿಶೀಲನೆ ಮಾಡುವ ಅನಿವಾರ್ಯತೆ ಇದೆ. ಪ್ರತಿಯೊಂದು ಆಚರಣೆ, ಉತ್ಸವಗಳನ್ನೂ ವೈಜ್ಞಾನಿಕ ದೃಷ್ಟಿಕೋನದಲ್ಲಿ ವಿವರಿಸಬೇಕಾಗಿದೆ. ಹಳೆಯ ಪದ್ಧತಿಗಳು, ಹಬ್ಬಹರಿದಿನಗಳು,

ಸಂಭ್ರಮಾಚರಣೆಗಳ ಇಂದಿನ ಕಾಲಘಟ್ಟಕ್ಕೆ ಎಷ್ಟರ ಮಟ್ಟಿಗೆ ಪ್ರಸ್ತುತ ಎನ್ನುವ ಚಿಂತನೆ ಮೂಡಬೇಕಾಗಿದೆ.

'ವಿದ್ಯಾರ್ಥಿಗಳು ಭತ್ತ ಬೆಳೆಯುವ ಗದ್ದೆಗಳಾಗಬೇಕು, ಭತ್ತ ತುಂಬುವ ಚೀಲಗಳಾಗಬಾರದು' ಎಂಬ ಕವಿ ಕುವೆಂಪುರವರ ನುಡಿಯಂತೆ, ವಿದ್ಯಾರ್ಥಿಗಳು ಕೇವಲ ಪಠ್ಯ ಪುಸ್ತಕದ ಜ್ಞಾನಕ್ಕೆ ಸೀಮಿತಗೊಳಿಸಿದರೆ ಅವರು ಬರಿಯ ಚೀಲಗಳಂತಾಗುತ್ತಾರೆ. ಅವರನ್ನು ಸಮೃದ್ಧ ಪೈರು ಬೆಳೆಯುವ ಭತ್ತದ ಗದ್ದೆಗಳಂತಾಗಿಸಲು ಕಲಿಕೆ ಅನುಭವಗಳ ಜತೆಯಲ್ಲಿ ಸಾಗಬೇಕು. ದೈನಂದಿನ ಜೀವನದ ಚಟುವಟಿಕೆಗಳೊಂದಿಗೆ ಕಲಿಕೆಯ ಅಂಶಗಳು ಸಮ್ಮಿಳಿತವಾಗಬೇಕು. ತಾವೇ ನೋಡಿ ಕಲಿತ, ಮಾಡಿ ಕಲಿತ ಚಟುವಟಿಕೆಗಳು ಮಕ್ಕಳಲ್ಲಿ ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತವೆ. ಸ್ವ ಅನುಭವಕ್ಕಿಂತ ದೊಡ್ಡ ಪಾಠ ಬೇರೊಂದಿಲ್ಲ. ಈ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಶಾಲೆಗಳಲ್ಲಿ ಹಾಕಿಕೊಂಡು ಕಾರ್ಯಗತಗೊಳಿಸಬಹುದಾಗಿದೆ.

ಪ್ರಸ್ತುತ ನಮ್ಮ ಕರ್ನಾಟಕದ ಶಿಕ್ಷಣದಲ್ಲಿನ ಧೋರಣೆಗಳು ನಮ್ಮ ಮಕ್ಕಳ ಸಂಕಷ್ಟಗಳಿಗೆ ಕೊನೆಯೇ ಇಲ್ಲದಂತಾಗಿದೆ. ಒಂದು ಕಡೆ ಪಠ್ಯಪುಸ್ತಕದ ತಿದ್ದುಪಡಿ ಗದ್ದಲ, ಇನ್ನೊಂದು ಕಡೆ ರಕ್ತಹೀನತೆ ಮತ್ತು ಅಪೌಷ್ಠಿಕತೆಯಿಂದ ನರಳುವ ಮಕ್ಕಳ ಸ್ಥಿತಿ, ಮತ್ತೊಂದು ಕಡೆ ಶಾಲೆಗೆ ಸೇರ್ಪಡೆಯಾಗುವ ಮಕ್ಕಳ ಸಂಖ್ಯೆಯಲ್ಲಿ ಕುಸಿತ ಮತ್ತೊಂದು ವಿಪರ್ಯಾಸ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಲ್ಲಿ ಅನ್ನ, ನೀರಿಗಾಗಿ ಪರಿತಪಿಸುವಂತಹ ಹೆಣ್ಣು ಮಕ್ಕಳ ಪರಿಸ್ಥಿತಿ.

ಕರ್ನಾಟಕ ಸರ್ಕಾರಕ್ಕೆ ಸರಿಯಾದ ಗುರಿ–ಉದ್ದೇಶವಿಲ್ಲದ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ, ಬೆಳೆಯುವ ಮಕ್ಕಳ ಮನಸ್ಸಿನಲ್ಲಿ ಮೂಢನಂಬಿಕೆ, ಧರ್ಮ, ಜಾತಿ, ಕನಿಷ್ಠ, ಶ್ರೇಷ್ಠ, ದೈವಶಕ್ತಿ, ಭಕ್ತಿಯ ಆರಾಧನೆ ಇತ್ಯಾದಿಗಳನ್ನು ತುಂಬಲಾಗುತ್ತಿದೆ. ಒಂದು ಪಠ್ಯಕ್ರಮದ ಚೌಕಟ್ಟೇ ಇಲ್ಲದೆ ಪರಿಷ್ಕರಣೆ ಹೇಗೆ ಸಾಧ್ಯ? ಪಠ್ಯ ಪರಿಷ್ಕರಣೆಗೆ ಮುಂದಾಗಿರುವವರು, 2005ರ ಪಠ್ಯಕ್ರಮ ಚೌಕಟ್ಟನ್ನು ಬಳಸಬೇಕು ಅಥವಾ ಅದರಲ್ಲಿ ನಂಬಿಕೆ ಇಲ್ಲದಿದ್ದರೆ ಹೊಸದಾಗಿ ರೂಪಿಸುತ್ತಿರುವ ಹೊಸ ಪಠ್ಯಕ್ರಮ ಚೌಕಟ್ಟು ಸಿದ್ಧವಾಗಿ ಪ್ರಜಾಸತ್ತಾತ್ಮಕ ವಿಧಾನದ ಮೂಲಕ ಅಂತಿಮಗೊಳ್ಳುವವರೆಗೆ ಯಥಾಸ್ಥಿತಿಯಲ್ಲಿ ಮುಂದುವರಿಸಬೇಕು ಇದಾವುದನ್ನು ಮಾಡಿಕೊಳ್ಳದೆ ಅಸಾಂವಿಧಾನಿಕ ಅಪ್ರಜಾಸತ್ತಾತ್ಮಕ ಮತ್ತು ಅವೈಜ್ಞಾನಿಕವಾಗಿ ಪಠ್ಯಪುಸ್ತಕ ಪರಿಷ್ಕರಣೆಗೆ ಮುಂದಾಗಿರುವುದು ಮಕ್ಕಳ ಶಿಕ್ಷಣದ ಹಿತದೃಷ್ಟಿಯಿಂದ ಅತ್ಯಂತ ವಿಷಾದಕರ ಬೆಳವಣಿಗೆಗೆ ನಾಂದಿಯಾಗುತ್ತದೆ.

ಶಾಲಾ ದಿನಗಳಲ್ಲಿ ವೇಗವಾಗಿ ವೃದ್ಧಿಯಾಗುವ ಬೌದ್ಧಿಕ, ದೈಹಿಕ, ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲಗಳು ಶೈಕ್ಷಣಿಕವಾಗಿ ಮಾತ್ರವಲ್ಲದೆ ಒಂದು ಮಗುವು ಸಾಮಾಜಿಕವಾಗಿ ಬೆಳೆಯುವುದು ಪ್ರಮುಖವಾಗಿರುತ್ತದೆ. ಆದ್ದರಿಂದ ಪಠ್ಯಕ್ರಮವು ಮಗುವಿನ ಭೌತಿಕ, ನೈತಿಕ, ಸಾಮಾಜಿಕ, ಆಧ್ಯಾತ್ಮಿಕ ಬೆಳವಣಿಗೆಗೆ ಅನ್ವಯಿಸುವ ಎಲ್ಲಾ ಚಟುವಟಿಕೆಗಳನ್ನು ಸೂಚಿಸಿ ಅವುಗಳನ್ನು ವಿದ್ಯಾರ್ಥಿಗಳ ವಯಸ್ಸು, ಅಭಿರುಚಿ, ಅಸಕ್ತಿ ಹಾಗೂ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಅನುಸರಿಸಿ ವಿದ್ಯಾರ್ಥಿಗಳ ಇಡೀ ಜೀವನವನ್ನೇ ರೂಪಿಸುತ್ತದೆ. ಪಠ್ಯಕ್ರಮ ಜೀವನವನ್ನು ಪೂರ್ಣತೆಯೆಡೆಗೆ ಕೊಂಡೊಯ್ದು ಅವನು ತನ್ನ ಕುಟುಂಬವನ್ನು ನಿಭಾಯಿಸುವಂತೆ ಅವನಿಗೆ ಉದ್ಯೋಗವಕಾಶವನ್ನು ಪಡೆಯಲು ಸಹಾಯ ಮಾಡುತ್ತದೆ.

ಪಠ್ಯಕ್ರಮವು ಮಕ್ಕಳ ಪ್ರತಿಭೆಯನ್ನು ಮಾತ್ರವಲ್ಲದೆ, ಅವರ ನೈತಿಕತೆ, ತತ್ತ್ವಶಾಸ್ತ್ರ, ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ, ಜೊತೆಗೆ ರಾಷ್ಟ್ರೀಯ ಅಭಿವೃದ್ಧಿಗೆ ಅದರ ಕಾಳಜಿ, ವಿಶೇಷವಾಗಿ

ಅದರ ಅತ್ಯಮೂಲ್ಯ ಸಂಪನ್ಮೂಲದ ಅಭಿವೃದ್ಧಿ ಅಂದರೆ ಮಾನವ ಅಭಿವೃದ್ಧಿಯನ್ನು ಒಳಗೊಂಡಿದೆ. ದೇಶದ ಅಗತ್ಯತೆಗಳು, ಆಕಾಂಕ್ಷೆ ಮತ್ತು ಪ್ರತಿಭೆಗೆ ಅನುಗುಣವಾಗಿ ಪಠ್ಯಕ್ರಮವನ್ನು ವಿಕಸನಗೊಳಿಸುವುದು ನಿಜಕ್ಕೂ ಒಂದು ಅಸಾಧಾರಣ ಕೆಲಸವಾಗಿದೆ. ಈ ಸತ್ಯವನ್ನು ಮೊದಲೇ ಅರಿತುಕೊಂಡರೆ ಪಠ್ಯಕ್ರಮದ ನೀತಿ, ವಿಷಯ ಮತ್ತು ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲರಿಗೂ ಉತ್ತಮವಾಗಲಿದೆ.

ಗ್ರಾಮೀಣ ಭಾಗದ ಮಕ್ಕಳಿಗೂ ಇತ್ತೀಚಿನ ದಿನಗಳಲ್ಲಿ ಕೃಷಿಯ ವಿವಿಧ ಬಗೆಗೆ ಅರಿವು ಕಡಿಮೆಯಾಗುತ್ತಿದೆ. ನಗರ ಪ್ರದೇಶದ ಮಕ್ಕಳಂತೂ ಕೃಷಿಯ ವಿಚಾರಗಳನ್ನು ಕೇವಲ ಪಾಠಗಳಲ್ಲಿ ಓದುವಂತಾಗಿದೆ. ಮಕ್ಕಳಿಗೆ ಕೃಷಿ ಜೀವನದ ಅನುಭವ ನೀಡಲು ಕೃಷಿಭೂಮಿಗೆ ಭೇಟಿ ನೀಡುವ ಅವಕಾಶ ನೀಡಬೇಕಾಗಿದೆ. ಅಲ್ಲಿ ಬೆಳೆಯುವ ವಿವಿಧ ಬೆಳೆಗಳು, ನೀರಾವರಿ ವಿಧಾನ, ಸಸ್ಯಗಳ ಬೆಳವಣಿಗೆಯ ಹಂತಗಳು, ಸಾವಯವ ಗೊಬ್ಬರ ಬಳಕೆ, ಕೃಷಿಗೆ ಪೂರಕ ಹೈನುಗಾರಿಕೆ, ಇಂಗುಗುಂಡಿ, ಭತ್ತದ ಒಕ್ಕಲಾಟ ಇವೆಲ್ಲವನ್ನು ವೀಕ್ಷಣೆ ಮಾಡಿ ಮಾಹಿತಿ ನಡೆದರೆ ಮಕ್ಕಳ ಕಲಿಕೆ ದೃಢಗೊಳ್ಳುತ್ತದೆ. ಜತೆಗೆ ಸಮುದಾಯದ ಜನರೊಡನೆ ಶಾಲೆಯ ಭಾಂಧವ್ಯ ಬಲಗೊಳ್ಳುತ್ತದೆ.

ಪಠ್ಯಗಳು ಸ್ಥಳೀಕರಣಗೊಳ್ಳಬೇಕು, ಏಕೆಂದರೆ ಮನುಷ್ಯರು ಬದುಕುವ ಶಕ್ತಿಯನ್ನು ಪಡೆಯುವುದು ಅವರು ಬಾಳುತ್ತಿರುವ ಪರಿಸರದಿಂದ, ಅಂತಹ ಮಕ್ಕಳನ್ನು ಅವರ ಪರಿಸರದಿಂದ ಆಚೆಗೆ ಕೊಂಡೊಯ್ದು ಬದುಕುವ ಶಕ್ತಿ ಒದಗಿಸುತ್ತೇವೆಂದು ಭಾವಿಸುವುದು ತಪ್ಪು ತಿಳುವಳಿಕೆಯಾಗಿದೆ. ಸದ್ಯದ ಪಠ್ಯಗಳಲ್ಲಿ ಆಫ್ರಿಕಾದ ಹುಲ್ಲುಗಾವಲನ್ನು 'ಸವನ್ನಾ' ಎಂದು ಹೇಳಿಕೊಡಲಾಗಿದೆ ಹೊರತು ಮಕ್ಕಳ ಮನೆ ಪಕ್ಕದ ಮೇವಿನ ತಾಣದ ಹೆಸರು ತಿಳಿಸುವ ವಿಚಾರ ಇಲ್ಲ. ಹುಲ್ಲುಗಾವಲನ್ನು ಸವನ್ನಾ ಎಂದಾದರೂ ಕರೆಯಲಿ ಅಥವಾ ಇನ್ನೇನಾದರೂ ಕರೆದುಕೊಳ್ಳಲಿ, ಅದರಿಂದ ನಮ್ಮ ಮಕ್ಕಳಿಗೆ ಆಗುವ ಭೌತಿಕ–ಭಾವನಾತ್ಮಕ ಪ್ರಯೋಜನವೇನು? ಇಲ್ಲ, ಮುಖ್ಯವಾಗಿ ಅವರಿಗೆ ಬದುಕುವ ಶಕ್ತಿ ಒದಗಬೇಕು, ಕುತೂಹಲ ಮತ್ತು ಆಸಕ್ತಿಗಳಿಂದ ಮಕ್ಕಳು ಪಠ್ಯವನ್ನು ಅಭ್ಯಾಸ ಮಾಡಬೇಕು ಅದಕ್ಕಾಗಿ ಮಕ್ಕಳ ಸುತ್ತಮುತ್ತ ಕಾಣುವ ಸಂಗತಿಗಳನ್ನೇ ಆಯ್ದುಕೊಂಡು ಪಠ್ಯರಚಿಸಲು ಸಾಧ್ಯವಾಗಬೇಕು. ಸದ್ಯದ ಭಾಷಾ ಪಠ್ಯಗಳ ವಿಚಾರ ಬಹಳ ಕೆಟ್ಟಿದೆ. ಅವುಗಳಲ್ಲಿ ಭಾಷೆಯ ಕೌಶಲ್ಯಕ್ಕಿಂತ ಪಠ್ಯವಸ್ತುವೇ ಪ್ರಧಾನವಾಗಿ ಬಿಟ್ಟಿದೆ. ಈ ವಸ್ತು ಪ್ರಧಾನತೆಯನ್ನು ತೊಡೆದು ಹಾಕಿ ಭಾಷಾ ಕೌಶಲ್ಯಕ್ಕೆ ಅಧ್ಯತೆ ದೊರೆಯಬೇಕು.

ಲೋಕ ಜೀವನದ ಬಗೆಗಿನ ನಮ್ಮ ದೃಷ್ಟಿಕೋನವೇನು? ಬದುಕನ್ನು ಯಾವ ತತ್ತ್ವಶಾಸ್ತ್ರೀಯ ಹಿನ್ನಲೆಯಲ್ಲಿ ನಮ್ಮ ಹಿರಿಯರು ಗ್ರಹಿಸಿದ್ದಾರೆ? ನಮ್ಮ ಮುಂದಿನ ತಲೆಮಾರು ಹೇಗೆ ಗ್ರಹಿಸಬೇಕು? ನಾವು ಹೇಗೆ ಗ್ರಹಿಸಿದ್ದೇವೆ? ವ್ಯಕ್ತಿ ಜೀವನದ ಉದ್ದೇಶವೇನು? ಸಮಾಜ ಜೀವನದ ಗುರಿ ಏನು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮೂಲಕ ಜೀವನ ದರ್ಶನವನ್ನು ಸ್ಪಷ್ಟಪಡಿಸಿಕೊಂಡು ಪಠ್ಯಕ್ರಮ ರಚಿಸಬೇಕು. ಉದಾಹರಣೆಗೆ ಈ ಜೀವನ ನಶ್ವರ, ಬದುಕೊಂದು ಭ್ರಮೆ, ಮುಕ್ತಿಯೇ ಸರ್ವಸ್ವ ಎಂಬ ಧೋರಣೆಯಿಂದ ಆಧ್ಯಾತ್ಮಿಕ ಪಠ್ಯಕ್ರಮ ರೂಪುಗೊಂಡಿತು. ಕಾಣದ ದೇವರು, ಕಾಣದ ಸ್ವರ್ಗ ಇತ್ಯಾದಿಗಳಿಗಿಂತ ಇಲ್ಲಿ ಕೈಗೆಟಕುವ ಪದಾರ್ಥಗಳು, ಇಹ ಜೀವನ ಸರ್ವ ಶ್ರೇಷ್ಠ ಎಂಬ ದರ್ಶನದಿಂದ ಲೌಕಿಕ ಶಿಕ್ಷಣದ ಪಠ್ಯಕ್ರಮ ಸಿದ್ಧವಾದಿತು. ಹೀಗಾಗಿ ಪಠ್ಯಕ್ರಮ ರಚನೆಯಲ್ಲಿ ತತ್ತ್ವಶಾಸ್ತ್ರೀಯ ದೃಷ್ಟಿ ಬಹು ಮುಖ್ಯ ಪಾತ್ರವಹಿಸುತ್ತದೆ. ಮಗುವಿಗೆ ಶಿಕ್ಷಣ ಶಿಕ್ಷೆಯಾಗದೆ, ಆತನ ವ್ಯಕ್ತಿತ್ವ ವಿಕಾಸಕ್ಕೆ ಹಾಗೂ ಉತ್ತಮ ನಡವಳಿಕೆಗೆ ಉತ್ತೇಜನ ನೀಡಬೇಕು. ಸಾಮಾಜಿಕ ಪ್ರಗತಿ, ಸಾಮಾಜಿಕ ನ್ಯಾಯಗಳ ಬಗ್ಗೆ ಎಚ್ಚರಿಕೆ ಹೊಂದಿರಬೇಕು ಇದರ ಮೂಲಕ ಸಾಮಾಜಿಕ ಏಳ್ಗೆ ಸಾಧಿಸಬೇಕಾಗಿದೆ.

ಎಂತಹ ಶಿಕ್ಷಣ ಬೇಕು ಎಂಬುದರ ಬಗ್ಗೆ ಪಾಲಕರಲ್ಲಿ ಒಮ್ಮತದ ಅಭಿಪ್ರಾಯವಿಲ್ಲದಿದ್ದರೂ ವೃತ್ತಿ ಆಧಾರಿತ ಶಿಕ್ಷಣದ ಬಗ್ಗೆ ಪಾಲಕರು ವಿಶೇಷ ಆಸಕ್ತಿ ಹೊಂದಿದ್ದಾರೆ. ಕೆಲವು ಪಾಲಕರು ತಮ್ಮ ಮಕ್ಕಳನ್ನು ಕಲಿ–ನಲಿ ಎಂದು ಇಲ್ಲಿಯೆ ಕೋತಿಯಂತೆ ಕುಣಿಸುತ್ತಾರೆ, ಆದರೆ ಕೆಲವು ಶಿಕ್ಷಕರು ತಮ್ಮ ಮಕ್ಕಳನ್ನು ದೊಡ್ಡ ಊರಿನ ಕಾನ್ವೆಂಟ್ ಶಾಲೆಗೆ ಕಳುಹಿಸುತ್ತಾರೆ ಎಂಬ ಹೊಟ್ಟೆಕಿಚ್ಚು ಕೂಡ ಇದೆ. ಪಾಲಕರ ಇಂತಹ ಸೂಕ್ಷ್ಮ ಮನೋಭಾವನೆ ನಮ್ಮ ಶಿಕ್ಷಣ ನೀತಿಗೆ ಮಾರ್ಗದರ್ಶಿಯಾಗಬಹುದು.

ಸಸ್ಯ ಸಂಪತ್ತು – ಪ್ರಾಣಿ ಸಂಪತ್ತು ಇಲ್ಲದಿದ್ದರೆ ಮಾನವ ಅಭಿವೃದ್ಧಿಯಾಗುವುದಿಲ್ಲ. ಒಂದು ದೇಶ ಅಥವಾ ರಾಜ್ಯ ಸಮೃದ್ಧ ಸಂಪತ್ತುಳ್ಳ ರಾಷ್ಟ್ರವಾಗಿ ಉಳಿಯಬೇಕಾಧರೆ ಅದರ ಭೂಭಾಗದ ಶೇಕಡ 33 ರಷ್ಟು ದಟ್ಟವಾದ ಅರಣ್ಯ ಪ್ರದೇಶವಿರಬೇಕು. ಅರಣ್ಯ ಪ್ರದೇಶ ಹೆಚ್ಚಾದಷ್ಟು ಹೆಚ್ಚು ಸಂಪನ್ನ ರಾಷ್ಟ್ರವಾಗಿ ಉಳಿಯಲು ಸಾಧ್ಯ, ಈ ಅಂಶಗಳನ್ನು ಪ್ರಾಥಮಿಕ ಹಂತದ ಪಠ್ಯವಸ್ತುವಿನಲ್ಲಿ ಸೇರಿಸಿ ಪರಿಸರ ಬಳಕೆ ಮತ್ತು ರಕ್ಷಣೆ ಮೂಡಿಸುವ ಕಾರ್ಯವಾಗಬೇಕಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಮಕ್ಕಳ ಕಣ್ಣಿಗೆ ಕಾಣಸಿಗುವ, ಕಲ್ಪನೆಗೆ ಎಟಕುವ, ಊಹೆಗೆ ನಿಲುಕುವ ವಿಚಾರಗಳಿಂದಲೇ ಪಠ್ಯರಚನೆಯಾಗಬೇಕು. ಇವೆಲ್ಲಕ್ಕಿಂತ ಮುಖ್ಯವಾಗಿ ಮಕ್ಕಳ ಕಲಿಕೆಯ ಫಲದಿಂದ ಮಕ್ಕಳಲ್ಲಿ ಉತ್ಪಾದಕ ಶಕ್ತಿ ಹೆಚ್ಚುವಂತೆ ಪಠ್ಯ ರಚನೆಯಾಗಬೇಕು. ಸ್ಥಳೀಯ ಸಂಪನ್ಮೂಲಗಳಿಂದ ಬದುಕಲು ಬೇಕಾದ ಆದಾಯ ಗಳಿಸಲು ಸಾಧ್ಯವಾಗುವಂತೆ ಪಠ್ಯವನ್ನು ವಿನ್ಯಾಸಗೊಳಿಸುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಶೋಕ ಜಿ.ಎನ್. (2009). ಉದಯೋನ್ಮುಖ ಭಾರತದಲ್ಲಿ ಶಿಕ್ಷಣ. ನವನೀತ ಪ್ರಕಾಶನ.
- ಜಗನ್ನಾಥರಾವ್ ಡಿ. (2008). ಕರ್ನಾಟಕದಲ್ಲಿ ಶಿಕ್ಷಣದ ಅವಲೋಕನ. ಭಾರತ ಸಂಸ್ಕೃತಿ ಪ್ರಕಾಶನ.
- ಕಾಶೀನಾಥ ಎಚ್.ಎಂ. ಮತ್ತು ಪಿ.ನಾಗರಾಜ. (1999). ರಾಷ್ಟ್ರೀಯ ಶಿಕ್ಷಣ ನೀತಿ: ಕಾರ್ಯ ಯೋಜನೆ 1986 ಪ್ರಗತಿ ಪರಿಶೀಲನೆ. ವಿದ್ಯಾನಿಧಿ ಪ್ರಕಾಶನ.
- ಕೊಂಗವಾಡ ಎನ್.ಬಿ. (2007). ಪಠ್ಯಕ್ರಮ ಮತ್ತು ಮೌಲ್ಯಮಾಪನ. ವಿದ್ಯಾನಿಧಿ ಪ್ರಕಾಶನ.
- ನಂಜುಂಡಸ್ವಾಮಿ ಎ.ಎಸ್. (1978). ಪಠ್ಯಕ್ರಮ ವಿಕಾಸ. ಸಮಾಜ ಪುಸ್ತಕಾಲಯ.
- ಪ್ರಶಾಂತ್ ಎಚ್.ಡಿ. (2005). ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಯದುರಾಜನ್ ಎಸ್.ಎಸ್. (ಅನು.) (2005). ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು. ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ.
- ಯಾದವಾಡ ಎಸ್.ಬಿ. (2011). ಪಠ್ಯಕ್ರಮ ಹಾಗೂ ಮೌಲ್ಯಮಾಪನ. ವಿದ್ಯಾನಿಧಿ ಪ್ರಕಾಶನ.